ಸದಸ್ಯರಲ್ಲಿ ಲಭ್ಯವಿದ್ದಲ್ಲಿ ಅದನ್ನು ಲಿಖಿತ ಮೂಲಕವಾಗಿ ನನಗೆ ಬರೆದು ಕೊಟ್ಟರೆ ಇದರ ಬಗ್ಗೆ ಗಮನ ಕೊಟ್ಟು ಅಂತರಿಕವಾಗಿ ವಿಚಾರಣೆಯನ್ನು ಮಾಡುತ್ತೇನೆ. ನಂತರ ನಾವು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂಬುದನ್ನು ನಾನು ತಮಗೆ ತಿಳಿಸುತ್ತೇನೆ.

(ಆ) ವಿಧೇಯಕಗಳ ಪರ್ಯಾಲೋಚನಾ ಪ್ರಸ್ತಾವ

(i) ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

SRI H.C. SRIKANTAIAH (MINISTER FOR REVENUE): The Karnataka Rent Control Act, 1961 (Karnataka Act No.22 of 1961) would have expired on 31st December 1999. Therefore it was considered necessary to extend the duration of the said Act for a further period of two years by amending Section 1 of the said Act. As the matter wasurgent and as both the Houses of the Karnatka State Legislature were not in session, the karnataka Rent Control (Amendment) Ordinance, 1999 was promulgated. This Bill seeks to replace the said Ordinance.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ , ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ತಿದ್ದುಪಡಿ ವಿಧೇಯಕದಲ್ಲಿ, ಸುಪ್ರೀಂಕೋರ್ಟ್ ಡಿಸಿಷೆಸ್ ಆದ ಮೇಲೆ ಈ ಕೇಸ್‌ಗಳ ಬಗ್ಗೆ, ಡೆಲ್ಲಿ ಹೈಕೋರ್ಟ್ ರೆಂಟ್ ಕಂಟ್ರೋಲ್ ಆಕ್ಟ್ ಅನ್ನು On the basis of the decision of the Supreme Court, they have amendedseveral provisions. ಕಮರ್ಷಿಯಲ್‌ಗೆ 500 ರೂಪಾಯಿ ಇರುವಂತಹ ಹೆಚ್.ಆರ್.ಸಿ.ಯನ್ನು ಒರಿಜಿನಲ್ ಸೂಟ್ ಹಾಕಿ ಮಾಡಿದ್ದಾರೆ. ಕರ್ನಾಟಕದಲ್ಲಿ 500 ರೂಪಾಯಿಗಳ ಹೆಚ್.ಆರ್.ಸಿ ಕೇಸ್‌ಗಳು ಯಾವುದು ಇದ್ದವೋ they have to be now converted into the original suits. ಹೆಚ್.ಆರ್.ಸಿಯಲ್ಲಿ ಎರಡು ವರ್ಷ ಮೂರು ವರ್ಷ ಇದ್ದಂತಹ ಕೇಸ್‌ಗಳನ್ನು ಇವತ್ತು ಪುನಃ ಅದನ್ನು ವಾಪಸ್‌ತೆಗೆದು ಒರಿಜಿನಲ್ ಸೂಟ್ ಪುನಃ ಹಾಕಬೇಕಾಗಿ ಒಂದು ಡೈರೆಕ್ಷನ್ ಕೊಟ್ಟಿದ್ದಾರೆ. ಆದ್ದರಿಂದ, to overcome this situation we have to amend serveral specific provisions which is now fixed for Rs.500/- and above. ಡೆಲ್ಲಿ; ಹೈಕೋರ್ಟ್ ರೆಂಟ್ ಕಂಟ್ರೋಲ್ ಆಕ್ಟ್‌ನಲ್ಲಿ 3,500-00 ರೂಪಾಯಿಗಳನ್ನು ಮಿನಿಮಮ್ ಆಗಿ ಮಾಡಿದ್ದಾರೆ. ನಮ್ಮಲ್ಲೂ ಕೂಡ ನಿರ್ದಿಷ್ಟ ಮೊತ್ತವನ್ನು ನಿಗಧಿಪಡಿಸಬಹುದು, ಉದಾಹರಣೆಗೆ ಐದು ಸಾವಿರ, ನಾಲ್ಕು ಸಾವಿರ ರೂಪಾಯಿ ಫಿಕ್ಸ್ we have to amend the act. ಮಾಡಿ ಅದು ಬಿಟ್ಟು ಅದನ್ನು ಮುಂದಕ್ಕೆ ಹಾಕಿಕೊಂಡರೆ ಹೋದರೆ ಏನೂ ಪ್ರಯೋಜನವಿಲ್ಲ. Exhauxtively the Rent control Act amendment has to be made. ಆದ್ದರಿಂದ, ತಾವು ಇದರ ಬಗ್ಗೆ ಅದಷ್ಟು ಬೇಗೆನೆ ಮಾಡಬೇಕಾಗುತ್ತದೆ. ಏಕೆಂದರೆ , ಬಹಳ ಜನಕ್ಕೆ ಇವತ್ತು

ತೊಂದರೆಯಾಗಿದೆ. ಕೇಸ್‌ಗಳು ಎಲ್ಲಾ ಮುಗಿದು ಹಿಯರಿಂಗ್ ಆಗುವ ಸ್ಟೇಜ್‌ನಲ್ಲಿ ಸುಪ್ರೀಂಕೋರ್ಟ್‌ನಿಂದ ಈ ಒಂದು ಜಡ್ಜ್‌ಮೆಂಟ್ ಬಂದಿದೆ. ಇದರ ಪ್ರಕಾರ ಅವರು ಏನು ಮಾಡಬೇಕಾಗುತ್ತದೆಂದರೆ, ಹೆಚ್.ಆರ್.ಸಿ. ಪ್ರೊಸೀಡಿಂಗ್ಸ್‌ನ್ನೆಲ್ಲಾ ಡ್ರಾಪ್ ಮಾಡಿ ಒರಿಜಿನಲ್ ಸೂಟ್ ಹಾಕಬೇಕಾಗುತ್ತದೆ. ತಾವು ಕೇವಲ ಎರಡು ವರ್ಷ ಮುಂದಕ್ಕೆ ಹಾಕಿದರೆ ಏನು ಪ್ರಯೋಜನವಿಲ್ಲ. ನಿಜವಾಗಲೂ ಇದೆಲ್ಲ ಬೇಕಾಗಿರುವುದು. HRC Act itself has to be amended and exhaustively it must be done on the basis of the Delhi Rent Control Act. ಆದ್ದರಿಂದ ಇದಕ್ಕೆ ತಾವು ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಕರ್ನಾಟಕ ಬಾಡಿಗೆ ನಿಯಂತ್ರಣ ಆಕ್ಟ್ ಏನು ಇದೆ ಇದು 1999 ಡಿಸೆಂಬರ್‌ಗೆ ಮುಕ್ತಾಯವಾಗಿರುವುದು. ಇವರು ಇದನ್ನು ಪುನಃ ಎರಡು ವರ್ಷದ ಅವಧಿಗೆ ವಿಸ್ತರಣೆ ಮಾಡಿ ತಿದ್ದುಪಡಿ ಮಾಡಿರುವುದು. ಸಾಂಪ್ರದಾಯಿಕ ಇದೊಂದು ತಿದ್ದುಪಡಿ ಇದರ ಬಗ್ಗೆ ಏನು ಪ್ರಶ್ನೆ ಇಲ್ಲ. ಇದನ್ನು ಮಾಡಲೇ ಬೇಕಾಗಿತ್ತು ಮಾಡಿದ್ದಾರೆ. ಇಲ್ಲವೆಂದರೆ ಅದೊಂದು ಶೂನ್ಯವಾಗುತ್ತದೆ. ಅದುದರಿಂದ, ಇವರು ಇದನ್ನು ಮಾಡಿದ್ದಾರೆ. ಆದರೆ, ಹಿಂದಿನ ಸರ್ಕಾರ ಇದ್ದಾಗ ಕೂಡ ಈ ಬಗ್ಗೆ ಒಂದು ಚಿಂತನೆ ನಡೆದಿತ್ತು ಏನೆಂದರೆ, ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಸಂಪೂರ್ಣವಾಗಿ ತಿದ್ದುಪಡಿ ಮಾಡಬೇಕು ಎನ್ನುವಂತಹ ಚಿಂತನೆ ನಡೆದಿತ್ತು. ಇದರ ಬಗ್ಗೆ ಶ್ರೀಮತಿ ಪ್ರಮೀಳಾದವರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿ ಏನು ತಿದ್ದುಪಡಿ ಮಾಡಬೇಕು ಎನ್ನುವುದರ ಬಗ್ಗೆ ಕೆಲವು ರಿಫಾರ್ಮ್ಸ್ ಕೂಡ ಕೊಟ್ಟಿದ್ದರು. ಆದರೆ ಅದು ಇನ್ನುವರೆವಿಗೂ ಕಾರ್ಯರೂಪದಲ್ಲಿ ಬರಲಿಲ್ಲ. ಏಕೆಂದರೆ, ಇಷ್ಟಿನ ಕಾಯಿದೆ ಪ್ರಕಾರ ಲ್ಯಾಂಡ್‌ಲಾರ್ಡ್ಸ್ ಮತ್ತು ಟೆನೆಂಟ್ಸ್ ನಡುವೆ ಈ ವಿಚಾರಣೆ ಶೀಘ್ರವಾಗಿ ಮುಗಿಯದೇ ಇರುವುದರಿಂದ ಲ್ಯಾಂಡ್‌ಲಾರ್ಡ್ಸ್ ಮತ್ತು ಟೆನೆಂಟ್‌ಗಳ ಮಧ್ಯೆ ಸಾಕಷ್ಟು ವ್ಯಾಜ್ಯಗಳಾಗಿವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ಸಮಗ್ರವಾದ ತಿದ್ದುಪಡಿ ತರುವುದರ ಮೂಲಕ ಆದಷ್ಟು ಬೇಗನೆ ಇದಕ್ಕೆ ಹೊಸ ಕಾನೂನು ರಚನೆ ಮಾಡಿ, ಸಮಗ್ರವಾಗಿ ತಿದ್ದುಪಡಿ ಮಾಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ತಾವೇ ಹೇಳಿದ ಹಾಗೆ ಡಿಸೆಂಬರ್ 31ಕ್ಕೆ ಇದರ ಅವಧಿ ಮುಗಿದಿತ್ತು. ಆದ್ದರಿಂದ, ಎರಡು ಸದನಗಳು ಕಾರ್ಯ ನಿರ್ವಹಿಸದೆ ಇದ್ದ ಸಂದರ್ಭದಲ್ಲಿ ಅಧ್ಯಾದೇಶದ ಮೂಲಕ ಅವಧಿ ವಿಸ್ತರಣೆಗಾಗಿ ತರಲಾಗಿತ್ತು. ಈಗ ಅದನ್ನು ಪುನಃ ರ್ಯಾಟಿಫೈ ಮಾಡಬೇಕಾಗಿದೆ. ತಾವು ಏನು ಸಲಹೆ ಕೊಟ್ಟಿದ್ದೀರಿ, ಅದನ್ನು ಕಾಂಪ್ರಹೆನ್ಸಿವ್ ಬಿಲ್ ಬಂದಾಗ ಇದರ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಕೆ. ಎನ್.ಸುಬ್ಬಾರೆಡ್ಡಿ : ಈಗ ತಾವು ತಂದಿರುವ ತಿದ್ದುಪಡಿಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಸಂಪೂರ್ಣವಾಗಿ ತಿದ್ದುಪಡಿ ಮಾಡಬೇಕು.

SRI D.B.CHANDREGOWDA : This is only for extansion of time because both the Houses were not in session. To raify that , we have brought this, Because today is the last date.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮನವಿ ಏನೆಂದರೆ, ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ? ದಯಮಾಡಿ ಈ ವಿಚಾರ ತಿಳಿಸಬೇಕು. ಏಕೆಂದರೆ, ಸುಮ್ಮನೆ ಇದನ್ನು ಮುಂದಕ್ಕೆ ಹಾಕಿಕೊಂಡು ಹೋದರೆ ಇದರಿಂದಾಗಿ ಜನಗಳಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000 ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು : " ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನೆ ಅಂಗೀಕಾರ

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000 ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000 ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪನೆ ಅಂಗೀಕರಿಸಲ್ಪಟ್ಟಿತು ಮತ್ತು ಮುಂದಿಗೆ ಒಪ್ಪಿಗೆ ನೀಡಲಾಯಿತು

(ii) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು : ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2000 ಪುನರ್ ಪರ್ಯಾಲೋಚಿಸುವುದು.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಇದರ ಬಗ್ಗೆ ನಾವು ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಬೇಕಾಗಿದೆ.

ಅಧ್ಯಕ್ಷರು : ಈಗಾಗಲೇ ಅಲ್ಲಿಂದ ಇದು ತಿರಸ್ಕೃತಗೊಂಡು ವಾಪಸ್ ಬಂದಿರುವುದರಿಂದ, the scope is very less. This House has already passed the Bill.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಹೇಳುವುದು ಸರಿ, ಆದರೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಎಸ್.ಸುರೇಶ್ ಕುಮಾರ್ : ನಮಗೆ ಈಗಲೂ ಕೂಡ ಎಲ್ಲೋ ಒಂದು ಆಸೆ ಇದೆ, ನಾವು ಸರ್ಕಾರವನ್ನು ಕನವಿನ್ಸ್ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಹೇಳಿದಂತೆ ವಿಧಾನ ಪರಿಷತ್ತಿನಲ್ಲಿ ತಿರಸ್ಕೃತಗೊಂಡಿರುವ, ಅಂದರೆ ಆ ತಿರಸ್ಕಾರ ಏಕೆ ಆಯಿತು ಎಂಬುದನ್ನು ನಾವು ಚರ್ಚೆ ಮಾಡಬೇಕಲ್ವೆ? ನಾವು ಇನ್ನು ಚರ್ಚೆ ಮಾಡಿಲ್ಲ, ತಾವು ಕೂಡ ಈ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು : ಆ ಮನೆಯ ವಿಷಯ ಏಕೆ ಅಲ್ಲಿ ತಿರಸ್ಕೃತವಾಯಿತು ಎಂದು ನಾವು ಇಲ್ಲಿ ಚರ್ಚೆ ಮಾಡುವ ಆಗಿಲ್ಲ. The Scope is very less. ಹಾಗಾದರೆ ಒಂದು ಕೆಲಸ ಮಾಡಿ 12-30ಕ್ಕೆ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಮಯವನ್ನು ನಿಗದಿ ಮಾಡುವುದು ತಮಗೆ ಬಿಟ್ಟ ವಿಚಾರ.

(ಗೊಂದಲ)

ಅಧ್ಯಕ್ಷರು : ನಾನು 12-30ಕ್ಕೆ ಮುಗಿಸಿ ಎಂದು ಏಕೆ ಹೇಳಿದೆನೆಂದರೆ, ಇಲ್ಲಿ ಪಾಸ್ ಆದ ನಂತರ ಪುನಃ ಕೌನ್ಸಿಲ್‌ಗೆ ಹೋಗಬೇಕು. They may reject it there or they may pass. ಕೌನ್ಸಿಲ್ ಇವತ್ತು ಮುಗಿಯುತ್ತದೆ. ಇವತ್ತು ಮಧ್ಯಾಹ್ನ ನಾಲ್ಕು ಗಂಟೆಯೊಳಗೆ ಅಲ್ಲಿಗೆ ಹೋಗಿ ಪಾಸ್ ಆಗಬೇಕು. ಇಲ್ಲದಿದ್ದರೆ ರಿಜೆಕ್ಟ್ ಆಗಬೇಕು, ಎರಡರಲ್ಲಿ ಒಂದಾಗಬೇಕು.